# ಕಾನೂನು ಕಿರಣ

# KANOONU KIRANA

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿಯ ಕಾನೂನು ಸಾಕ್ಷರತಾ ಪತ್ರಿಕೆ

ಸಾರ್ವಜನಿಕ ಹಿತಾಸಕ್ತಿಯಲ್ಲಿ * ಖಾಸಗಿ ಪ್ರಸಾರಕ್ಕೆ ಮಾತ್ರ

LEGAL LITERACY NEWS LETTER OF KARNATAKA STATE LAW UNIVERSITY, HUBBALLI

ಹುಬ್ಬಳ್ಳಿ | ಅಗಸ್ಟ್ 2019 | ಪುಟ-4


## ಯುವಕರಲ್ಲಿ ಸಹಕಾರ ಸಂಘದ ತತ್ವಗಳ ಕುರಿತು ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಸಹಕಾರಿ ಸಂಸ್ಥೆಯು ದುಡಿಯುತ್ತಿದೆ – ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿ



ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಮತ್ತು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ದಿನಾಂಕ 30/08/2019ರಂದು ಹಮ್ಮಿಕೊಂಡ 'ಸಹಕಾರ ಮತ್ತು ಯುವಕರು' ಕಾರ್ಯಕ್ರಮವನ್ನು ಪ್ರೊ.(ಡಾ.) ಪಿ. ಈಶ್ವರ ಭಟ್ ಗೌರವಾನ್ವಿತ ಕುಲಪತಿಗಳು, ಕರಾಕಾವಿ, ಹುಬ್ಬಳ್ಳಿ ಇವರು ಉದ್ಘಾಟಿಸುತ್ತಿರುವರು. ಚಿತ್ರದಲ್ಲಿ ಇತರ ಗಣ್ಯರು ಉಪಸ್ಥಿತರಿರುವರು.

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಮತ್ತು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ದಿನಾಂಕ : 30 ಅಗಸ್ಟ್ 2019 ರಂದು 'ಸಹಕಾರ ಮತ್ತು ಯುವಕರು' ಕುರಿತು ಸಹಕಾರ ಜಾಗೃತಿ ಕಾರ್ಯಕ್ರಮ ಹಾಗೂ ಸಹಕಾರ ಶಿಕ್ಷಣ, ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳ ಒಡಂಬಡಿಕೆ ಉದ್ಘಾಟನಾ ಕಾರ್ಯಕ್ರಮವನ್ನು ಬೆಳಿಗ್ಗೆ 10.30 ಗಂಟೆಗೆ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿಯ ಆವರಣದಲ್ಲಿ ಹಮ್ಮಿಕೊಳ್ಳಲಾಯಿತು.

ದೇಶದಲ್ಲಿ ಸುಮಾರು ಎಂಟು ಲಕ್ಷ ಐವತ್ತು ಸಾವಿರ ಸಹಕಾರಿ ಸಂಘಗಳು ಕಾರ್ಯನಿರ್ವಹಿಸುತ್ತಿದ್ದು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಹೊಸ ರೂಪದ ಸಹಕಾರಿ ಉದ್ದಿಮೆಗಳನ್ನು ಉತ್ತೇಜಿಸುವ ಮತ್ತು ಸದಸ್ಯ ಸಹಕಾರಿಗಳ ಅಗತ್ಯದ ಮೇರೆಗೆ ಸೇವೆಗಳನ್ನು ಒದಗಿಸುವ ಹಾಗೂ ಯುವಕರಲ್ಲಿ ಸಹಕಾರ ಸಂಘದ ತತ್ವಗಳ ಕುರಿತು ಜಾಗೃತಿಯನ್ನು ಮೂಡಿಸುವ ಉತ್ತಮ ಕೆಲಸ ಮಾಡುತ್ತಿದೆ ಎಂದು ಕಾರ್ಯಕ್ರಮಕ್ಕೆ ಉದ್ಘಾಟಕರಾಗಿ ಆಗಮಿಸಿದ್ದ ಪ್ರೊ.(ಡಾ.) ಪಿ. ಈಶ್ವರ ಭಟ್ ಗೌರವಾನ್ವಿತ ಕುಲಪತಿಗಳು, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ ಇವರು ಅಭಿಪ್ರಾಯಪಟ್ಟರು.

ಶ್ರೀ ಶರಣಗೌಡ ಜಿ. ಪಾಟೀಲ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಸಹಕಾರಿ ಕ್ಷೇತ್ರದ ಕಿರು ಪರಿಚಯವನ್ನು ನೀಡುತ್ತಾ, ಸಹಕಾರಿ ತತ್ವಗಳು "ತಾನು ಎಲ್ಲರಿಗಾಗಿ ಎಲ್ಲರೂ ತನಗಾಗಿ" ಎಂಬ ಸಹಕಾರದ ಮೂಲ ತತ್ವದ ಮೇಲೆ ಕಾರ್ಯಾಚರಣೆ ಮಾಡುತ್ತಿದ್ದು, ಕರ್ನಾಟಕ ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾನೂನಿನಡಿಯಲ್ಲಿ ನೋಂದಾಯಿತವಾದ ಸಂಸ್ಥೆಗಳಿಗೆ ಮಾರ್ಗದರ್ಶನ, ಶಿಕ್ಷಣಗಳನ್ನು ಒದಗಿಸುವ ಮತ್ತು ಸದಸ್ಯ ಸಹಕಾರಿಗಳ ಹಿತಾಶಕ್ತಿಗಳನ್ನು ಕಾಪಾಡುವುದೆ ಸಂಸ್ಥೆಯ ಉದ್ದೇಶವಾಗಿದೆ ಎಂದರು.

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಮತ್ತು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು 'ಸಹಕಾರ ಶಿಕ್ಷಣ ಸಂಶೋಧನೆ ಹಾಗೂ ಅಭಿವೃದ್ಧಿ' ಕಾರ್ಯಕ್ರಮಗಳ ಒಡಂಬಡಿಕೆಯನ್ನು ಮಾಡಿಕೊಂಡರು. ನಂತರ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ 'ಕಾನೂನು ಕಿರಣ' ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಶ್ರೀ ಆರ್. ರವಿಶಂಕರ್, ಭಾ.ಅ.ಸೇ., ಮಾನ್ಯ ಕುಲಸಚಿವರು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ನವನಗರ, ಹುಬ್ಬಳ್ಳಿ, ಡಾ. ಜಿ. ಬಿ. ಪಾಟೀಲ, ಕುಲಸಚಿವರು ಮೌಲ್ಯಮಾಪನ (ಪ್ರಭಾರ), ಶ್ರೀ ಬಾಪುಗೌಡ ಪಾಟೀಲ, ಮಾನ್ಯ ಅಧ್ಯಕ್ಷರು, ಕೆಡಿಸಿಸಿ ಬ್ಯಾಂಕ್, ಧಾರವಾಡ, ಶ್ರೀ ಬಸವರಾಜ ಅರಬಗೊಂಡ, ಮಾನ್ಯ ಅಧ್ಯಕ್ಷರು, ಹಾಲು ಉತ್ಪಾದಕರ ಒಕ್ಕೂಟ, ಧಾರವಾಡ, ಶ್ರೀ ಚಂದ್ರಕಾಂತ ಪಡಚಣ್ಣವರ, ಮಾನ್ಯ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀ ಬಾಪುಗೌಡ ಪಾಟೀಲ ಮಾನ್ಯ ಅಧ್ಯಕ್ಷರು ಕೆಡಿಸಿಸಿ ಬ್ಯಾಂಕ್, ಧಾರವಾಡ ಇವರು ಮಾತನಾಡುತ್ತ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಶೀಘ್ರ ಬೆಳವಣಿಗೆಗೆ ಮತ್ತು ಇದರ ಬಗ್ಗೆ ಯುವ ಜನತೆಯಲ್ಲಿ ಜಾಗೃತಿ ನೀಡುವ ಸಲುವಾಗಿ ರಾಜ್ಯಾದ್ಯಂತ ಶಿಬಿರಗಳನ್ನು ಆಯೋಜಿಸಿ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಮತ್ತು ಸಾರ್ವಜನಿಕರ ಸೇವೆಗೆ ಪ್ರಯತ್ನಿಸಲಾಗುತ್ತಿದೆ ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿ, ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ಮಾತನಾಡುತ್ತ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಸ್ವಾಯತ್ತತೆ, ಸ್ವಯಂ ಆಡಳಿತ, ಸ್ವಯಂ ನಿಯಂತ್ರಣದ ವೃತ್ತಿಪರ, ಪಾರ

## ಸಂಪಾದಕೀಯ

ನಮ್ಮ ಕಾನೂನು ವ್ಯವಸ್ಥೆಯ ಕಾರ್ಯಚರಣೆಯು ನ್ಯಾಯಸಾಧನೆಗೆ ದಾರಿಯಾಗಬೇಕೆಂದೂ, ರಾಜ್ಯವು ಸರ್ವರಿಗೂ ಸಮಾನ ನ್ಯಾಯವನ್ನು ಒದಗಿಸುವ ಹೊಣೆಗಾರಿಕೆಯನ್ನು ಹೊತ್ತಿದೆಯೆಂದೂ ಹೇಳುವ ಸಾಂವಿಧಾನಿಕ ನಿರ್ದೇಶನದ (ಅನುಚ್ಛೇದ 39 A) ಇಂಗಿತವು ಕಾನೂನಿಗೂ ನ್ಯಾಯಕ್ಕೂ ಇರುವ ಸಂಬಂಧವನ್ನು ಸ್ಪಷ್ಟಗೊಳಿಸುವುದಲ್ಲದೆ ಕಾನೂನು ನೆರವಿನ ಧೋರಣೆಯ ತಿರುಳು ಕೂಡಾ ಆಗಿದೆ. ಜನಸಾಮಾನ್ಯರಲ್ಲಿ ಕಾನೂನಿನ ಅರಿವು ಮೂಡಿಸುವುದು ಕಾನೂನು ನೆರವು ಕಾರ್ಯಕ್ರಮದ ಅನಿವಾರ್ಯ ಭಾಗವಾಗಿದೆ. ಕಾನೂನು ನೆರವು ಕೇಂದ್ರ (legal aid clinic) ಮತ್ತು ಕಾನೂನು ಸಾಕ್ಷರತಾ ಆಂದೋಲನದ ಮೂಲಕ ಕಾನೂನು ವಿದ್ಯಾರ್ಥಿಗಳು ತಮ್ಮನ್ನು ತಾವು ಸಾಮುದಾಯಿಕ ಪ್ರಯತ್ನಗಳಲ್ಲಿ ತೊಡಗಿಸಿಕೊಳ್ಳುವುದು ಕಾನೂನಿನ ಸಾಮಾಜಿಕ ಪ್ರಸ್ತುತತೆಯನ್ನು, ಸುಖೀ ಪ್ರಜಾಪ್ರಭುತ್ವದ ಆಯಾಮವನ್ನು ಹಾಗೂ ಕಾನೂನು ಕಾರ್ಯಾಚರಣೆಯ ಪ್ರಕ್ರಿಯೆಯನ್ನು ಅರಿತುಕೊಳಲು ಬಹಳಷ್ಟು ಸಹಾಯ ವಾಗುತ್ತವೆ. ಕಾನೂನು ಸೇವಾ ಪ್ರಾಧಿಕಾರ ಹಾಗೂ ಸಮಾಜ ಸೇವಾಸಕ್ತ ಸಂಘಟನೆಗಳೊಂದಿಗೆ ಪಾಲುಗಾರಿಕೆ ಯಿಂದ ಕಾರ್ಯ ನಿರ್ವಹಿಸುವುದು ವಿದ್ಯಾರ್ಥಿಗಳ ಕೌಶಲ್ಯವರ್ಧನೆಗೂ ಅವಕಾಶ ಮಾಡಿಕೊಡುತ್ತದೆ.

ಮೇಲಿನ ಧ್ಯೇಯಕ್ಕೆ ಪೂರಕವಾಗಿರುವ ಹಾಗೂ ಸಾರ್ವಜನಿಕರಿಗೆ ಕಾನೂನು ಮಾಹಿತಿಯನ್ನು ಪ್ರಸರಿಸುವ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ **'ಕಾನೂನು ಕಿರಣ'** 2019ನೇ ಇಸವಿಯ ಅಗಸ್ಟ್ ಸಂಚಿಕೆ ನಿಮ್ಮ ಮುಂದಿದೆ. ಈ ಸಾಕ್ಷರತಾ ಪತ್ರಿಕೆಯ ಗುಣಮಟ್ಟವನ್ನು ಮತ್ತಷ್ಟು ಹೆಚ್ಚಿಸಲು ಹಾಗೂ ವಿಶ್ವವಿದ್ಯಾಲಯದ ಕಾನೂನು ಸಾಕ್ಷರತಾ/ ನೆರವು ಕಾರ್ಯಕ್ರಮಗಳನ್ನು ಹೆಚ್ಚು ಅರ್ಥಪೂರ್ಣವಾಗಿ ಮಾಡಲು ನಿಮ್ಮ ಸಲಹೆಗೆ ಸ್ವಾಗತ.

**ನಿಮ್ಮ ವಿಶ್ವಾಸಿ,**
**ಪ್ರೊ. (ಡಾ.) ಪಿ. ಈಶ್ವರ ಭಟ್**
ಕುಲಪತಿಗಳು, ಕರಾಕಾವಿ, ನವನಗರ, ಹುಬ್ಬಳ್ಳಿ.


### ಸಂಪಾದಕೀಯ ಮಂಡಳಿ

| | |
|---|---|
| **ಪ್ರೊ. (ಡಾ.) ಪಿ. ಈಶ್ವರ ಭಟ್**<br>ಕುಲಪತಿಗಳು<br>ಕರಾಕಾವಿ, ಹುಬ್ಬಳ್ಳಿ. | **ಪೋಷಕರು** |
| **ಪ್ರೊ. ಡಾ. ಸಿ. ಎಸ್. ಪಾಟೀಲ**<br>ಡೀನ್ ಮತ್ತು ನಿರ್ದೇಶಕರು,<br>ಕರಾಕಾವಿ ಕಾನೂನು ಶಾಲೆ, ಹುಬ್ಬಳ್ಳಿ. | **ಸಲಹೆಗಾರರು** |
| **ಶ್ರೀ ಆರ್. ರವಿಶಂಕರ್** ಭಾ.ಆ.ಸೇ.<br>ಕುಲಸಚಿವರು<br>ಕರಾಕಾವಿ, ಹುಬ್ಬಳ್ಳಿ. | **ಸಲಹೆಗಾರರು** |
| **ಡಾ. ಜಿ. ಬಿ. ಪಾಟೀಲ**<br>ಕುಲಸಚಿವರು ಮೌಲ್ಯಮಾಪನ (ಪ್ರಭಾರ),<br>ಕರಾಕಾವಿ, ಹುಬ್ಬಳ್ಳಿ. | **ಸಲಹೆಗಾರರು** |
| **ಡಾ. ಭೀಮಾಬಾಯಿ ಎಸ್. ಮೂಲಗೆ**<br>ಸಹಾಯಕ ಪ್ರಾಧ್ಯಾಪಕರು,<br>ಕರಾಕಾವಿ, ಹುಬ್ಬಳ್ಳಿ. | **ಸದಸ್ಯರು** |
| **ಡಾ. ರಂಗಸ್ವಾಮಿ ಡಿ.**<br>ಸಹಾಯಕ ಪ್ರಾಧ್ಯಾಪಕರು,<br>ಕರಾಕಾವಿ, ಹುಬ್ಬಳ್ಳಿ. | **ಸದಸ್ಯರು** |
| **ಶ್ರೀ. ಸುನಿಲ ಬಾಗಡೆ**<br>ಸಹಾಯಕ ಪ್ರಾಧ್ಯಾಪಕರು,<br>ಕರಾಕಾವಿ, ಹುಬ್ಬಳ್ಳಿ. | **ಸದಸ್ಯರು** |


# ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆ ಮತ್ತು ಕಾನೂನು

## ಭಾಗ-4: ದೇಶೀಯ ಕಾನೂನುಗಳು

ಜುಲೈ ಸಂಚಿಕೆಯ ಮುಂದುವರೆದ ಭಾಗ


-ಪ್ರೊ. (ಡಾ.) ಪಿ. ಈಶ್ವರ ಭಟ್
ಕುಲಪತಿಗಳು,
ಕರಾಕಾವಿ, ನವನಗರ, ಹುಬ್ಬಳ್ಳಿ


**3. ಸಂರಕ್ಷಿತ ಕ್ಷೇತ್ರ**

1958ರ ಅಧಿನಿಯಮದ ಮೂಲಕ ಅಥವಾ ಅಡಿಯಲ್ಲಿ ರಾಷ್ಟ್ರೀಯ ಮಹತ್ವದ್ದೆಂದು ಘೋಷಿಸಲಾದ ಯಾವುದೇ ಪ್ರಾಕ್ತನ ಸ್ಥಳ ಅಥವಾ ಅವಶೇಷಗಳನ್ನು ಸಂರಕ್ಷಿತ ಕ್ಷೇತ್ರವೆಂದು ಅರ್ಥೈಸಿದೆ (ಕಲಂ 2(i)). ಮಾಲೀಕ ಅಥವಾ ನಿವಾಸಿಗನೂ ಸೇರಿದಂತೆ ಯಾರೊಬ್ಬ ವ್ಯಕ್ತಿಯೂ ಕೂಡಾ ಸಂರಕ್ಷಿತ ಕ್ಷೇತ್ರದಲ್ಲಿ ಕೇಂದ್ರ ಸರಕಾರದ ಅನುಮತಿಯಿಲ್ಲದೆ ಗಣಿಗಾರಿಕೆ, ಕಲ್ಲೆಬ್ಬಿಸುವುದು, ತೋಡುವುದು (ಉತ್ಖನನ), ಸ್ಫೋಟಗೊಳಿಸಿ ಒಡೆಯುವುದು ಅಥವಾ ಈ ರೀತಿಯ ಕೆಲಸಗಳನ್ನು ಮಾಡಬಾರದು. ಆದರೆ ಕೃಷಿಯ ಉದ್ದೇಶದಿಂದ ಮೇಲ್ಮೈಯಿಂದ ಒಂದು ಅಡಿ ಆಳದವರೆಗಿನ ಮಣ್ಣನ್ನು ಅಗೆಯುವುದು ಈ ನಿಷೇಧದ ವ್ಯಾಪ್ತಿಯಲ್ಲಿ ಬರುವುದಿಲ್ಲ. ಯಾವುದೇ ವ್ಯಕ್ತಿಯು ಸಂರಕ್ಷಿತ ಕ್ಷೇತ್ರದಲ್ಲಿ ನಿಯಮಬಾಹಿರವಾಗಿ ಕಟ್ಟಡವನ್ನು ನಿರ್ಮಿಸಿದರೆ, ಕೇಂದ್ರ ಸರಕಾರದ ಆದೇಶದ ಮೇರೆಗೆ ಅಂತಹ ಕಟ್ಟಡವು ಸೂಚಿತ ಸಮಯದೊಳಗೆ ಸದರಿ ವ್ಯಕ್ತಿಯ ಖರ್ಚಿನಿಂದ ನಿರ್ಮೂಲನೆಗೊಳ್ಳತಕ್ಕದ್ದು. ಯಾವುದೇ ಸಂರಕ್ಷಿತ ಕ್ಷೇತ್ರದಲ್ಲಿ, ರಾಷ್ಟ್ರೀಯ ಮಹತ್ವ ಮತ್ತು ಮೌಲ್ಯವುಳ್ಳ ಪ್ರಾಚೀನ ಸ್ಮಾರಕ ಅಥವಾ ಪುರಾವಶೇಷಗಳು ಇರುವುದೆಂದು ಕೇಂದ್ರ ಸರಕಾರವು ಅಭಿಪ್ರಾಯಪಟ್ಟಲ್ಲಿ *ಭೂಸ್ವಾಧೀನ ಅಧಿನಿಯಮ, 1894*ರ ಅಡಿಯಲ್ಲಿ ಅಂತಹ ಸ್ವಾಧೀನವು ಸಾರ್ವಜನಿಕ ಉದ್ದೇಶಕ್ಕಾಗಿಯೆಂಬ ಅರ್ಥದಲ್ಲಿ ಸದರಿ ಕ್ಷೇತ್ರವನ್ನು ಸ್ವಾಧೀನಪಡಿಸಬಹುದು (ಕಲಂ 20).

**4. ನಿಷೇಧಿತ ಮತ್ತು ನಿಯಂತ್ರಿತ ಕ್ಷೇತ್ರಗಳು**

ಸಂರಕ್ಷಿತ ಕ್ಷೇತ್ರ ಅಥವಾ ಸಂರಕ್ಷಿತ ಸ್ಮಾರಕದ ಸರಹದ್ದಿನಿಂದ ಮೊದಲ್ಗೊಂಡು ಎಲ್ಲ ದಿಕ್ಕುಗಳಿಗೂ ವ್ಯಾಪಿಸುವ ನೂರು (100) ಮೀಟರ್ ದೂರದವರೆಗಿನ ಪ್ರತಿಯೊಂದು ಕ್ಷೇತ್ರವೂ ಸದರಿ ಸಂರಕ್ಷಿತ ಕ್ಷೇತ್ರ ಅಥವಾ ಸಂರಕ್ಷಿತ ನಿಯಂತ್ರಿತ ಕ್ಷೇತ್ರಗಳಿಗೆ ಸಂಬಂಧಿಸಿದ ನಿಷೇಧಿತ ಕ್ಷೇತ್ರವಾಗಿರುತ್ತದೆ. ರಾಷ್ಟ್ರೀಯ ಸ್ಮಾರಕ ಪ್ರಾಧಿಕಾರದ ಶಿಫಾರಸ್ಸಿನ ಮೇರೆಗೆ ಕೇಂದ್ರ ಸರಕಾರವು ನೂರು ಮೀಟರಗಿಂತ ಹೆಚ್ಚಿನ ಭೂಭಾಗವನ್ನು ಕೂಡಾ ನಿಷೇಧಿತ ಕ್ಷೇತ್ರದ ವ್ಯಾಪ್ತಿಯಲ್ಲಿ ತರಬಹುದು. ನಿಷೇಧಿತ ಕ್ಷೇತ್ರದಲ್ಲಿ ಪ್ರಾಕ್ತನ ಅಧಿಕಾರಿಯಲ್ಲದೆ ಇತರ ಯಾರೂ ಕೂಡಾ ಕಟ್ಟಡ ಕಟ್ಟುವ ಕೆಲಸವನ್ನು ಮಾಡಿಸತಕ್ಕದ್ದಲ್ಲ. ತುಘಲಕಾಬಾದ್ ಕೋಟೆಗೆ ಸಂಬಂಧಿಸಿದಂತೆ ಕಟ್ಟಡ ಕಟ್ಟುವ ಕೆಲಸವನ್ನು ಈ ಕಲಂನ ಅಡಿಯಲ್ಲಿ ನಿಷೇಧಿಸಲಾಯಿತು (*ಎಸ್. ಎಸ್. ಭಾರದ್ವಾಜ ವಿ. ಆರ್ಕಿಯಾಲಜಿಕಲ್ ಸರ್ವೆ ಆಫ್ ಇಂಡಿಯಾ* (2016) 3 ಎಸ್‌ಸಿಸಿ 691).

ಆದರೆ ಸಾರ್ವಜನಿಕ ಕಾಮಗಾರಿ ಅಥವಾ ಸಾರ್ವಜನಿಕ ಆವಶ್ಯಕತೆಯುಳ್ಳ ಯಾವುದೇ ಯೋಜನೆಗೆ ಅಗತ್ಯ ಮತ್ತು ಅನಿವಾರ್ಯವೆಂದು ಕಂಡುಬಂದಲ್ಲಿ ಅಥವಾ ಸದರಿ ಸ್ಮಾರಕ ಅಥವಾ ಅದರ ಮಗ್ಗುಲಲ್ಲಿರುವ ಭೂಭಾಗದ ರಕ್ಷಣೆ, ಭದ್ರತೆ ಮತ್ತು ಪ್ರವೇಶಕ್ಕೆ ಅಂತಹ ಕೆಲಸವು ಯಾವುದೇ ಕೆಟ್ಟ ಪರಿಣಾಮವನ್ನು ಬೀರಲಾರದು ಎಂದು ಕೇಂದ್ರ ಸರಕಾರಕ್ಕೆ ಅಥವಾ ಪ್ರಧಾನ ನಿರ್ದೇಶಕನಿಗೆ ಕಂಡುಬಂದಲ್ಲಿ, ವಿಶೇಷವಾದ ತುರ್ತಿನ ಸಂದರ್ಭದಲ್ಲಿ ಮತ್ತು ಸಾರ್ವಜನಿಕ ಹಿತಾಸಕ್ತಿಯನ್ನು ಗಮನದಲ್ಲಿಟ್ಟು ಕೇಂದ್ರ ಸರಕಾರವು ಅಥವಾ ಪ್ರಧಾನ ನಿರ್ದೇಶಕನು ಲಿಖಿತ ಕಾರಣಗಳನ್ನು ನೀಡಿ ನಿಷೇಧಿತ ಕ್ಷೇತ್ರದಲ್ಲಿ, ಸದರಿ ಸಾರ್ವಜನಿಕ ಕಾಮಗಾರಿ ಅಥವಾ ಯೋಜನೆಗಳಿಗೆ ಅನುಮತಿಯನ್ನು ನೀಡಬಹುದು. ಆದರೆ 2010ರ ತಿದ್ದುಪಡಿಯ ನಂತರ ಇದಕ್ಕೆ ಅವಕಾಶವಿಲ್ಲ (ಕಲಂ 20A).

ನಿಷೇಧಿತ ಕ್ಷೇತ್ರದ ಹೊರವಲಯದಲ್ಲಿ ನಿಯಂತ್ರಿತ ಕ್ಷೇತ್ರವು ಬರುತ್ತದೆ. ರಾಷ್ಟ್ರೀಯ ಮಹತ್ವದ್ದೆಂದು ಘೋಷಿಸಲಾದ ಪ್ರತಿಯೊಂದು ಪ್ರಾಚೀನ ಸ್ಮಾರಕ ಮತ್ತು ಪ್ರಾಕ್ತನ ಸ್ಥಳ ಹಾಗೂ ಅವಶೇಷಗಳ ನಿಷೇಧಿತ ಕ್ಷೇತ್ರದ ಸರಹದ್ದುಗಳನ್ನು ಮೊದಲ್ಗೊಂಡು ಅವುಗಳ ಎಲ್ಲಾ ದಿಕ್ಕುಗಳಲ್ಲೂ ಇನ್ನೂರು (200) ಮೀಟರ್ ದೂರದವರೆಗೆ ಇರುವ ಭೂಭಾಗವು ನಿಯಂತ್ರಿತ ಕ್ಷೇತ್ರವಾಗಿರುತ್ತದೆ. ಆದರೆ ಕೇಂದ್ರ ಸರಕಾರವು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಿಸುವ ಮೂಲಕ 200 ಮೀಟರಗಿಂತಲೂ ಹೆಚ್ಚಿನ ಭೂಭಾಗವನ್ನು ನಿಯಂತ್ರಿತ ಕ್ಷೇತ್ರವಾಗಿ ನಿಗದಿಪಡಿಸಬಹುದು.

ದಿನಾಂಕ 16, ಜೂನ್ 1992ರ ಮೊದಲು ಮಾಲೀಕನಾಗಿದ್ದುಕೊಂಡು ಪ್ರಧಾನ ನಿರ್ದೇಶಕನ ಅನುಮತಿಯಿಂದ ನಿಷೇಧಿತ ಕ್ಷೇತ್ರದಲ್ಲಿ ಕಟ್ಟಿದ ಕಟ್ಟಡಗಳ ದುರಸ್ತಿ ಮತ್ತು ನವೀಕರಣವನ್ನು ಮಾಡಲು ಅನುಮತಿ ಕೋರಿ ಸದರಿ ಮಾಲೀಕನು ಸಕ್ಷಮ ಅಧಿಕಾರಿಗೆ ಅರ್ಜಿ ಸಲ್ಲಿಸಬಹುದು. ಹಾಗೆಯೇ, ನಿಯಂತ್ರಿತ ಕ್ಷೇತ್ರದಲ್ಲಿರುವ ಯಾವುದೇ ಕಟ್ಟಡ, ರಚನೆ ಅಥವಾ ಭೂಮಿಯ ಮಾಲೀಕನು ಸದರಿ ಕಟ್ಟಡದ ಅಥವಾ ರಚನೆಯ ಕಟ್ಟುವಿಕೆ, ಪುನ್ರರಚನೆ, ದುರಸ್ತಿ ಅಥವಾ ನವೀಕರಣ ಮಾಡುವ ಉದ್ದೇಶಕ್ಕಾಗಿ ಸಕ್ಷಮ ಅಧಿಕಾರಿಗೆ ಅರ್ಜಿಯನ್ನು ಸಲ್ಲಿಸಬಹುದು (ಕಲಂ 20C). ಸಕ್ಷಮ ಅಧಿಕಾರಿಯು ಅಂತಹ ಅರ್ಜಿಗಳನ್ನು ಅರ್ಜಿಸ್ವೀಕರಿಸಿದ 15 ದಿನಗಳೊಳಗೆ ಅಂತಹ ಕಾಮಗಾರಿಯಿಂದ ಪ್ರಾಚೀನ ಕಟ್ಟಡಕ್ಕೆ ಅಥವಾ ಪ್ರಾಚೀನ ಸ್ಥಳಗಳಿಗೆ ಆಗುವ ಪರಿಣಾಮದ ಬಗ್ಗೆ ತನ್ನ ಅಭಿಪ್ರಾಯವನ್ನು ಕೊಡಲು ಕೋರುತ್ತಾ ಕಳುಹಿಸತಕ್ಕದ್ದು. ರಾಷ್ಟ್ರೀಯ ಸ್ಮಾರಕ ಪ್ರಾಧಿಕಾರವು ತಾನು ಅರ್ಜಿ ಸ್ವೀಕರಿಸಿದ 2 ತಿಂಗಳೊಳಗೆ ಅಂತಹ ಕಾಮಗಾರಿಗಳ ಪರಿಣಾಮವನ್ನೂ ಹಾಗೆಯೇ ಯಾವುದೇ ಬೃಹತ್ ಮಟ್ಟದ ಅಭಿವೃದ್ಧಿ ಯೋಜನೆ, ಸಾರ್ವಜನಿಕ ಯೋಜನೆ ಮತ್ತು ಸಾರ್ವಜನಿಕರಿಗೆ ಅವಶ್ಯವಿರುವ ಯೋಜನೆಗಳ ಪರಿಣಾಮದ ಕುರಿತು ಕೂಡಾ ಅಭಿಪ್ರಾಯವನ್ನು ಕೊಡತಕ್ಕದ್ದು. ರಾಷ್ಟ್ರೀಯ ಸ್ಮಾರಕ ಪ್ರಾಧಿಕಾರದಿಂದ ಮಾಹಿತಿ ಬಂದ ಒಂದು ತಿಂಗಳೊಳಗೆ, ಸದರಿ ಮಾಹಿತಿಯಂತೆ ಅರ್ಜಿದಾರನಿಗೆ ಸದರಿ ಕಾಮಗಾರಿಗೆ ಅನುಮತಿ ಕೊಡುವ ಅಥವಾ ನಿರಾಕರಿಸುವ ನಿರ್ಣಯವನ್ನು ತಿಳಿಸತಕ್ಕದ್ದು. ರಾಷ್ಟ್ರೀಯ ಸ್ಮಾರಕ ಪ್ರಾಧಿಕಾರದ ಶಿಫಾರಸ್ಸು ಅಂತಿಮವಾಗಿರುತ್ತದೆ. ಸಕ್ಷಮ ಅಧಿಕಾರಿಯು ಕಾಮಗಾರಿಗೆ ಅನುಮತಿ ನಿರಾಕರಿಸಿದ ವಿಚಾರವನ್ನು ಕೇಂದ್ರ ಸರಕಾರಕ್ಕೆ ಮತ್ತು ಸದರಿ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು. ಕಾಮಗಾರಿಗೆ ಅನುಮತಿ ನೀಡಿ ಕಾಮಗಾರಿಯು ಪ್ರಗತಿಯಲ್ಲಿರುವ ಸಂದರ್ಭದಲ್ಲಿ ಅಂತಹ ಕಾಮಗಾರಿಯಿಂದ ಸ್ಮಾರಕದ ರಕ್ಷಣೆ, ಭದ್ರತೆ, ಸುರಕ್ಷೆ ಅಥವಾ ಅವುಗಳನ್ನು ತಲುಪಬಹುದಾದ ದಾರಿಗೆ ತೊಂದರೆಯಾಗುತ್ತದೆಯೆಂದು ಸಕ್ಷಮ ಅಧಿಕಾರಿಯು ಕಂಡಕೊಂಡಲ್ಲಿ ಅಂತಹ ವಿಚಾರವನ್ನು ರಾಷ್ಟ್ರೀಯ ಸ್ಮಾರಕ ಪ್ರಾಧಿಕಾರದ ಪರಿಗಣನೆಗೆ ಕಳುಹಿಸಬೇಕು. ಒಂದು ವೇಳೆ ಪ್ರಾಧಿಕಾರವು ನಕಾರಾತ್ಮಕ ಸಲಹೆಯನ್ನಿತ್ತಲ್ಲಿ, ಕಾಮಗಾರಿಗೆ ಕೊಟ್ಟ ಅನುಮತಿಯನ್ನು ಹಿಂತೆಗೆದುಕೊಳ್ಳಬೇಕು. ಕೇಂದ್ರ ಸರಕಾರ ವ ಪ್ರಧಾನ ನಿರ್ದೇಶಕರು ಅನುಮತಿಕೊಟ್ಟ ಅಥವಾ ನಿರಾಕರಿಸಿದ ವಿಚಾರವನ್ನು ತಮ್ಮ ಅಂತರ್ಜಾಲದಲ್ಲಿ ಪ್ರಕಟಿಸತಕ್ಕದ್ದು (ಕಲಂ 20D).

ಗಣಿಗಾರಿಕೆ, ಕೈಗಾರಿಕೆ, ನಿರ್ಮಾಣ, ಇತ್ಯಾದಿಗಳಿಂದ ಪ್ರಾಚೀನ ಸ್ಮಾರಕ, ಪ್ರಾಕ್ತನ ಸ್ಥಳ ಮತ್ತು ಅವಶೇಷಗಳಿಗೆ

(ನಾಲ್ಕನೇ ಪುಟಕ್ಕೆ)

ಶ್ರೀಮತಿ ಅರ್ಚನಾ ಕೆ.
ಸಹಾಯಕ ಪ್ರಾಧ್ಯಾಪಕರು, ಕರಾಕಾವಿ, ಹುಬ್ಬಳ್ಳಿ

# ಡಿಜಿಟಲ್ ಯುಗದಲ್ಲಿ ಗ್ರಾಹಕರ ಸಂರಕ್ಷಣೆ

ಸಾಂಪ್ರದಾಯಿಕ ಶೈಲಿಯ ಸರಕು ಸಾಮಾಗ್ರಿಗಳ ಖರೀದಿಯ ಯುಗಾಂತ್ಯಗೊಂಡು ಅಂತರ್ಜಾಲ ತಾಣದ ಮೂಲಕ ದಿನನಿತ್ಯದ ಅವಶ್ಯಕ ವಸ್ತುಗಳನ್ನು ಖರೀದಿಸುವ ಡಿಜಿಟಲ್ ಯುಗವು ಪ್ರಾರಂಭಗೊಂಡಿದ್ದು, ಇದು ನವೀನ ರೀತಿಯ ವ್ಯಾಪಾರವನ್ನಷ್ಟೇ ಅಲ್ಲದೆ ಡಿಜಿಟಲ್ ವಾಣಿಜ್ಯ ಮತ್ತು ಡಿಜಿಟಲ್ ಬ್ರಾಂಡ್‌ಗಳ ಹೊಸ ಯುಗಕ್ಕೆ ನಾಂದಿ ಹಾಡಿದೆ. ಈ ಡಿಜಿಟಲ್ ಯುಗವು ಸುಲಭ ಡಿಜಿಟಲೀಕರಣದೊಂದಿಗೆ ವೈವಿಧ್ಯಮಯವಾದ ಆಯ್ಕೆಗಳು, ಅನುಕೂಲಕರ ಪಾವತಿ ವಿಧಾನಗಳು, ಸುಧಾರಿತ ಸೇವೆಗಳನ್ನೂ ಹೊಂದಿದ್ದು ಗ್ರಾಹಕರಲ್ಲಿ ಹೊಸ ನಿರೀಕ್ಷೆಗಳನ್ನು ಮೂಡಿಸುತ್ತಿದೆ. ಸುಲಭ; ಸರಳೀಕೃತ ಡಿಜಿಟಲ್ ಕಾರ್ಯ ವೈಖರಿಯಿಂದಾಗಿ ಲಕ್ಷಾಂತರ ಗ್ರಾಹಕರು ಆನ್ ಲೈನ್ ಖರೀದಿಗೆ ಮೊರೆಹೋದುದಷ್ಟೇ ಅಲ್ಲದೆ ಕೆಲವೊಮ್ಮೆ ಕಳಪೆ ಗುಣಮಟ್ಟದ ಸಾಮಾಗ್ರಿಗಳು, ಅನುಚಿತ ಸೇವೆಗಳು, ಪೂರೈಕೆದಾರರ ವಂಚನೆಯಂತಹ ತೊಂದರೆಗಳಿಗೆ ಒಳಗಾಗಿರುವ ನಿರ್ದೇಶನಗಳು ಅನೇಕ. ಈ ಬೆಳವಣಿಗೆಗಳು ಆನ್ ಲೈನ್ ಖರೀದಿಯ ಅನುಕೂಲಗಳ ಜೊತೆಗೆ ಗ್ರಾಹಕರ ಹಕ್ಕುಗಳಿಗೆ ಚ್ಯುತಿಯುಂಟು ಮಾಡಿದ್ದು, ದೇಶದ ಸರ್ವತೋಮುಖ ಅಭಿವೃದ್ಧಿಯ ಹಾದಿಯಲ್ಲಿ ಡಿಜಿಟಲೀಕರಣ, ವಿದ್ಯುನ್ಮಾನ ವಾಣಿಜ್ಯ ಮತ್ತು ಗ್ರಾಹಕರ ದಾರಿ ತಪ್ಪಿಸುವ ಸುಳ್ಳು ಜಾಹೀರಾತುಗಳು ದೇಶಕ್ಕೆ ಸವಾಲಾಗಿ ಪರಿಣಮಿಸಿದ್ದವು. ಭಾರತದಲ್ಲಿ ಗ್ರಾಹಕರ ಸಂರಕ್ಷಣೆಗಾಗಿ, *ಗ್ರಾಹಕ ಸಂರಕ್ಷಣಾ ಅಧಿನಿಯಮ, 1986*ರನ್ನು ಜಾರಿಗೊಳಿಸಲಾಗಿದ್ದರೂ, ಮೂರು ದಶಕಗಳಿಗಿಂತಲೂ ಹಳೆಯದಾದ ಈ ಕಾಯ್ದೆಯು ಡಿಜಿಟಲ್ ಯುಗದ ಆವಶ್ಯಕತೆಗಳನ್ನು ಪೂರೈಸುವಲ್ಲಿ ವಿಫಲವಾಗಿತ್ತು. ಇದನ್ನು ಗಮನದಲ್ಲಿಟ್ಟುಕೊಂಡು ಡಿಜಿಟಲ್ ಯುಗದಲ್ಲಿ ಗ್ರಾಹಕರು ಎದುರಿಸುತ್ತಿರುವ ಸವಾಲುಗಳನ್ನು ಎದುರಿಸಲು ಮತ್ತು ಸೂಕ್ತ ಪರಿಹಾರಗಳನ್ನು ನೀಡಲು ಆಗಸ್ಟ್ 6, 2019ರಂದು ಭಾರತೀಯ ಸಂಸತ್ತು, ಹೊಸ *ಗ್ರಾಹಕ ಸಂರಕ್ಷಣಾ ಅಧಿನಿಯಮ*ವನ್ನು ಅಂಗೀಕರಿಸಿದೆ. ಈ ಕಾಯ್ದೆಯು ಗ್ರಾಹಕರಿಗೆ ಸಮಯೋಚಿತ ಹಾಗೂ ಪರಿಣಾಮಕಾರಿ ಆಡಳಿತ ಮತ್ತು ಪರಿಹಾರವನ್ನು ಒದಗಿಸುವ ಗುರಿಯನ್ನು ಹೊಂದಿದ್ದು, ಅದಕ್ಕಾಗಿ ಕಾಯ್ದೆಯಡಿಯಲ್ಲಿ ಹಲವಾರು ಕ್ರಮಗಳನ್ನು ಪ್ರಸ್ತಾಪಿಸಲಾಗಿದೆ. ಗ್ರಾಹಕರ ಹಕ್ಕುಗಳನ್ನು ಕಾಪಾಡುವ ನಿಟ್ಟಿನಲ್ಲಿ ಈ ಕಾಯ್ದೆಯು, ಈಗಾಗಲೇ ಅಸ್ತಿತ್ವದಲ್ಲಿರುವ ನಿಯಮಗಳನ್ನು ಇನ್ನಷ್ಟು ಬಿಗಿಗೊಳಿಸಿದ್ದು, ದಾರಿ ತಪ್ಪಿಸುವ ಜಾಹೀರಾತುಗಳಿಗೆ ಕಠಿಣ ದಂಡ, ಕೇಂದ್ರೀಯ ನಿಯಂತ್ರಕನ ನೇಮಕಾತಿ, ವಿದ್ಯುನ್ಮಾನ ವಾಣಿಜ್ಯ ಮತ್ತು ಎಲೆಕ್ಟ್ರಾನಿಕ್ ಸೇವಾ ಪೂರೈಕೆದಾರರಿಗೆ ಮಾರ್ಗಸೂಚಿಯಂತಹ ಮಹತ್ವದ ಉಪಬಂಧಗಳನ್ನು ಹೊಂದಿದೆ. ಇದಲ್ಲದೆ ಈ ಅಧಿನಿಯಮವು ಹಲವಾರು ಗ್ರಾಹಕ ಸ್ನೇಹಿ ಗುಣಲಕ್ಷಣಗಳನ್ನು ಹೊಂದಿದ್ದು ಅವುಗಳಲ್ಲಿ ಪ್ರಮುಖವಾದುವುಗಳೆಂದರೆ–

**1. ಕೇಂದ್ರ ಗ್ರಾಹಕ ಸಂರಕ್ಷಣಾ ಪ್ರಾಧಿಕಾರದ (ಸಿಸಿಪಿಎ) ಸ್ಥಾಪನೆ**

ಕೇಂದ್ರ ಗ್ರಾಹಕ ಸಂರಕ್ಷಣಾ ಪ್ರಾಧಿಕಾರದ ಸ್ಥಾಪನೆಯನ್ನು ಈ ಕಾಯ್ದೆಯಡಿಯಲ್ಲಿ ಉಲ್ಲೇಖಿಸಲಾಗಿದ್ದು, ಇದು ಗ್ರಾಹಕರ ಹಕ್ಕುಗಳ ಉಲ್ಲಂಘನೆ, ಸುಳ್ಳು ಮತ್ತು ದಾರಿ ತಪ್ಪಿಸುವ ಜಾಹೀರಾತುಗಳು ಹಾಗೂ ಪಕ್ಷಪಾತೀಯ ವ್ಯವಹಾರಗಳನ್ನು ಪರಿಶೀಲಿಸುವ ಹಾಗೂ ಕ್ರಮ ಜರುಗಿಸುವ ಅಧಿಕಾರ ವ್ಯಾಪ್ತಿಯನ್ನು ಹೊಂದಿದ್ದು, ಗ್ರಾಹಕರ ಹಕ್ಕುಗಳನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತದೆ. ಈ ಪ್ರಾಧಿಕಾರಕ್ಕೆ ಶೋಧಿಸುವ, ವಶಕ್ಕೆ ತೆಗೆದುಕೊಳ್ಳುವ, ವಿಚಾರಿಸುವ ಹಾಗೂ ತನಿಖೆ ನಡೆಸುವ ಅಧಿಕಾರಗಳನ್ನು ನೀಡಲಾಗಿದ್ದು, ತಪ್ಪು ಜಾಹೀರಾತುಗಳು ಮತ್ತು ಅದರ ಅನುಮೋದಕರ ವಿರುದ್ಧ ಕ್ರಮ ಜರುಗಿಸುವ ಅಧಿಕಾರವಿರುವುದಲ್ಲದೆ, ಸುಳ್ಳು ಮತ್ತು ಗ್ರಾಹಕರ ದಾರಿ ತಪ್ಪಿಸುವ ಜಾಹೀರಾತುಗಳು ಅಥವಾ ಯಾವುದೇ ಉತ್ಪನ್ನ ಅಥವಾ ಸೇವೆಯ ಬಗ್ಗೆ ತಪ್ಪು ಮಾಹಿತಿ ನೀಡಿದಲ್ಲಿ ಅಂತಹವರಿಗೆ 10 ಲಕ್ಷ ರೂಪಾಯಿಗಳವರೆಗೆ ದಂಡ ಮತ್ತು 2 ವರ್ಷಗಳವರೆಗಿನ ಕಾರಾಗೃಹ ಶಿಕ್ಷೆಯನ್ನು ವಿಧಿಸುವ ಅಧಿಕಾರವಿರುತ್ತದೆ. ಅಪರಾಧಿಯ ಅಪರಾಧವು ಮರುಕಳಿಸಿದಲ್ಲಿ ದಂಡದ ಮೊತ್ತವನ್ನು 50 ಲಕ್ಷಗಳು ಹಾಗೂ 5 ವರ್ಷಗಳವರೆಗಿನ ಕಾರಾಗೃಹ ಶಿಕ್ಷೆಯವರೆಗೆ ಹೆಚ್ಚಿಸಬಹುದಾಗಿದೆ.

**2. ಆನ್ ಲೈನ್ ದೂರು ಸಲ್ಲಿಕೆ**

ಹೊಸ ಕಾಯ್ದೆಯನ್ವಯ ಗ್ರಾಹಕರ ವಾಸಸ್ಥಳ ಅಥವಾ ಕೆಲಸದ ಸ್ಥಳ, ಖರೀದಿ ಸ್ಥಳ ಅಥವಾ ಮಾರಾಟಗಾರನ ನೋಂದಾಯಿತ ಕಛೇರಿ ವಿಳಾಸವನ್ನು ಹೊಂದಿರುವ ಸ್ಥಳ ಮಾತ್ರವಲ್ಲದೆ, ಗ್ರಾಹಕರು ವಿದ್ಯುನ್ಮಾನ ದೂರುಗಳನ್ನು ಅಂದರೆ, ಆನ್ ಲೈನ್ ಮೂಲಕವೂ ದೂರು ದಾಖಲಿಸಬಹುದು. ಅಲ್ಲದೆ ನ್ಯಾಯಾಲಯವು ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ ಪಕ್ಷದಾರರ ಪಾಟೀ ಸವಾಲು ಹಾಗೂ ವಾದಗಳನ್ನು ಆಲಿಸುವ ಅವಕಾಶವನ್ನೂ ಕಲ್ಪಿಸಲಾಗಿದೆ. ಈ ರೀತಿಯ ಸರಳೀಕೃತ ಕಾರ್ಯವಿಧಾನವು ಗ್ರಾಹಕರಿಗೆ ನ್ಯಾಯ ಒದಗಿಸುವಲ್ಲಿ ಸಹಕಾರಿಯಾಗಿದೆ.

**3. ಉತ್ಪನ್ನದ ಮೇಲಿನ ಹೊಣೆಗಾರಿಕೆ**

ಹೊಸ ಕಾಯ್ದೆಯು "ಉತ್ಪನ್ನದ ಮೇಲಿನ ಹೊಣೆಗಾರಿಕೆ"ಯ ಪರಿಕಲ್ಪನೆಯನ್ನು ಪರಿಚಯಿಸಿದ್ದು, ಉತ್ಪನ್ನ ದೋಷ ಅಥವಾ ಕಳಪೆ ಸಾಮಗ್ರಿಗಳ ಬಳಕೆಯಿಂದ ಗ್ರಾಹಕನಿಗೆ ತೊಂದರೆಯುಂಟಾದಲ್ಲಿ, ಅಥವಾ ಉತ್ತಮ ಗುಣಮಟ್ಟದ ಸೇವೆಯನ್ನು ಸೇವಾ ಪೂರೈಕೆದಾರರು ನೀಡದಿದ್ದಲ್ಲಿ, ಗ್ರಾಹಕನು ಗ್ರಾಹಕ ಆಯೋಗದಲ್ಲಿ ಉತ್ಪನ್ನದ ತಯಾರಕ, ಉತ್ಪನ್ನದ ಸೇವಾ ಪೂರೈಕೆದಾರರು ಮತ್ತು ಉತ್ಪನ್ನದ ಮಾರಾಟಗಾರರ ಮೇಲೆ ದೂರು ದಾಖಲಿಸುವ ಅವಕಾಶವನ್ನು ಮಾಡಿಕೊಡಲಾಗಿದೆ. ಈ ಕಾಯ್ದೆಯಡಿಯಲ್ಲಿ ತಯಾರಕರು ಹಾಗೂ ಸೇವಾ ಪೂರೈಕೆದಾರರನ್ನು ಬಾಧ್ಯರನ್ನಾಗಿಸುವ ಮತ್ತು ಪೀಡಿತ ಗ್ರಾಹಕನಿಗೆ ಪರಿಹಾರವನ್ನು ನೀಡುವ ಹೊಣೆಗಾರಿಕೆಯನ್ನು ಪ್ರಸ್ತಾಪಿಸಲಾಗಿರುವುದರ ಜೊತೆಗೆ 'ಉತ್ಪನ್ನದ ಮಾರಾಟಗಾರ' ಎಂದರೆ ಯಾರು ಎಂದೂ ವ್ಯಾಖ್ಯಾನಿಸಲಾಗಿದೆ. ಯಾವುದೇ ವ್ಯಕ್ತಿ ಮಾರಾಟ ಮಾಡುವ ಉದ್ದೇಶದಿಂದ ಸರಕುಗಳನ್ನು ಪ್ರಚುರಪಡಿಸಿದಲ್ಲಿ ಅವನನ್ನು 'ಉತ್ಪನ್ನದ ಮಾರಾಟಗಾರ' ಎಂದು ಪರಿಗಣಿಸಲಾಗುತ್ತದೆ ಹಾಗೂ ಈ ವ್ಯಾಖ್ಯೆಯು ವಿದ್ಯುನ್ಮಾನ ಕ್ಷೇತ್ರದ ವರ್ತಕನನ್ನು ಒಳಗೊಂಡಿರುತ್ತದೆ. ಗ್ರಾಹಕ ಸಂರಕ್ಷಣೆಯ ಈ ಕಾಯ್ದೆಯು, ಮಾರಾಟಗಾರನ ನಿರ್ಲಕ್ಷ್ಯ ಅಥವಾ ವಂಚಕೀಯ ಉದ್ದೇಶಗಳಿಲ್ಲದಿದ್ದಾಗಲೂ ಅವನನ್ನು ಬಾಧ್ಯನನ್ನಾಗಿಸುತ್ತಿದ್ದು, ಗ್ರಾಹಕನಿಂದ ಉತ್ಪನ್ನದ ಅನಧಿಕೃತ ಮಾರ್ಪಾಡು, ದುರ್ಬಳಕೆಯಂತಹ ಸಂದರ್ಭಗಳಲ್ಲಿ ಮಾತ್ರವೇ ಮಾರಾಟಗಾರನು ವಿನಾಯತಿಯನ್ನು ಪಡೆಯಬಹುದಾಗಿದೆ.

**4. ಅಧಿಕಾರ ವ್ಯಾಪ್ತಿ**

ಈ ಹಿಂದಿನ ಗ್ರಾಹಕ *ಸಂರಕ್ಷಣಾ ಅಧಿನಿಯಮ, 1986*ರಡಿಯಲ್ಲಿ ಸ್ಥಾಪಿಸಲಾಗಿದ್ದ ಗ್ರಾಹಕರ ಪರಿಹಾರ ಆಯೋಗಗಳು ಅಥವಾ ಜಿಲ್ಲಾ, ರಾಜ್ಯ ಮತ್ತು ರಾಷ್ಟ್ರೀಯ ಗ್ರಾಹಕ ನ್ಯಾಯಾಲಯಗಳ ವಿತ್ತೀಯ ಅಧಿಕಾರ ವ್ಯಾಪ್ತಿಯನ್ನು ಈ ಕಾಯಿದೆಯಡಿಯಲ್ಲಿ ವಿಸ್ತರಿಸಲಾಗಿದ್ದು, ಪ್ರಕರಣಗಳ ಮೌಲ್ಯವನ್ನಾಧರಿಸಿ ನ್ಯಾಯಾಲಯಗಳು ತಮ್ಮ ಅಧಿಕಾರ ವ್ಯಾಪ್ತಿಯನ್ನು ಗುರುತಿಸಿಕೊಳ್ಳಬಹುದಾಗಿದೆ. ಅದರಂತೆ, ಜಿಲ್ಲಾ ಗ್ರಾಹಕ ಆಯೋಗದ ಅಧಿಕಾರ ವ್ಯಾಪ್ತಿಯನ್ನು ಒಂದು ಕೋಟಿ ರೂಪಾಯಿಗಳಿಗೆ ಹೆಚ್ಚಿಸಿದ್ದು, ಹಾಗೆಯೇ ರಾಜ್ಯ ಆಯೋಗದ ಅಧಿಕಾರ ವ್ಯಾಪ್ತಿಯನ್ನು 10 ಕೋಟಿಗಳಿಗೆ ಮತ್ತು ರಾಷ್ಟ್ರೀಯ ಆಯೋಗದ ಅಧಿಕಾರ ವ್ಯಾಪ್ತಿಯನ್ನು 10 ಕೋಟಿಗೆ ಮೀರಿದ ಪ್ರಕರಣಗಳೆಂದು ವಿಂಗಡಿಸಿದ್ದು ಇದರಿಂದ ಬಹುಸಂಖ್ಯೆಯ ಗ್ರಾಹಕರು ತಮ್ಮ ನೆರೆಯ ಗ್ರಾಹಕ ಆಯೋಗದಡಿಯಲ್ಲಿ ಪರಿಹಾರ ಪಡೆಯುವಂತಾಗಿದೆ.

**5. ಮಧ್ಯಸ್ಥಿಕೆಯ ಮೂಲಕ ವಿವಾದಗಳ ಇತ್ಯರ್ಥ**

ಈ ಕಾಯ್ದೆಯು 'ಬದಲಿ ವಿವಾದ ಇತ್ಯರ್ಥ' ವಿಧಾನಕ್ಕೆ ಒತ್ತುಕೊಟ್ಟಿದ್ದು, ಆಯೋಗಗಳು ಪ್ರಕರಣದ ದೂರನ್ನು ದಾಖಲಿಸಿಕೊಳ್ಳುವ ಮುನ್ನ ವಿವಾದವನ್ನು ಮಧ್ಯಸ್ಥಿಕೆಯ ಮೂಲಕ ಇತ್ಯರ್ಥಪಡಿಸಿಕೊಳ್ಳಲು ಸೂಚಿಸಬೇಕಿದ್ದು, ಒಂದೊಮ್ಮೆ ಪಕ್ಷಗಳು ವಿಫಲವಾದಲ್ಲಿ ಮಾತ್ರವೇ, ದೂರನ್ನು ನ್ಯಾಯಾಲಯದ ಪ್ರಕ್ರಿಯೆಯ ಮೂಲಕ ತೀರ್ಮಾನಿಸಬೇಕಿದೆ.

**ಉಪಸಂಹಾರ**

*ಗ್ರಾಹಕ ಸಂರಕ್ಷಣಾ ಅಧಿನಿಯಮ, 2019* ಗ್ರಾಹಕನ ಹಿತಾಸಕ್ತಿಯನ್ನು ಕಾಪಾಡುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯನ್ನಿರಿಸಿದ್ದು, "ಗ್ರಾಹಕನೇ ಎಚ್ಚರ" ಎಂಬ ಪರಿಕಲ್ಪನೆಯಿಂದ, "ಮಾರಾಟಗಾರನೇ ಎಚ್ಚರ" ಎಂಬ ಸನ್ನಿವೇಶವನ್ನು ನಿರ್ಮಿಸಿದೆ. ಹೆಜ್ಜೆ ಹೆಜ್ಜೆಗೂ ವಿದ್ಯುನ್ಮಾನ ವಾಣಿಜ್ಯವನ್ನು ಅವಲಂಬಿಸಿರುವ ಗ್ರಾಹಕರೆಲ್ಲರಿಗೂ ಈ ಹೊಸ ಕಾನೂನು ಸಂಪೂರ್ಣ ಸಂರಕ್ಷಣೆಯನ್ನು ಒದಗಿಸುವ ಗುರಿಯನ್ನು ಹೊಂದಿದ್ದು, ನಿಜಾರ್ಥದಲ್ಲಿ ಗ್ರಾಹಕ ಪ್ರಭು ಆಗಬೇಕಿದ್ದಲ್ಲಿ, ಈ ಕಾನೂನಿನ ಸದ್ಬಳಕೆ ಹಾಗೂ ಸರಿಯಾದ ಅನುಷ್ಠಾನದ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ. ❖

## ಸಾಂಸ್ಕೃತಿಕ ಪರಂಪರೆಯ...

(ಎರಡನೇ ಪುಟದಿಂದ)

ಹಾನಿಯಾಗದಂತೆ ನೋಡಿಕೊಳ್ಳಲು ಮೇಲಿನ ಉಪಬಂಧಗಳು ಕೆಲಸಮಾಡುತ್ತವೆ. ಪ್ರತಿಯೊಂದು ಸಂರಕ್ಷಿತ ಸ್ಮಾರಕ ಅಥವಾ ಸಂರಕ್ಷಿತ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕಲೆ ಮತ್ತು ಸಾಂಸ್ಕೃತಿಕ ಪರಂಪರೆಯ ರಾಷ್ಟ್ರೀಯ ನ್ಯಾಸದ ಅಥವಾ ಇನ್ನಿತರ ಪಾರಂಪರಿಕ ಸಂಸ್ಥೆಗಳ ಅಭಿಪ್ರಾಯಗಳನ್ನು ಪಡೆದುಕೊಂಡು ಸಕ್ಷಮ ಪ್ರಾಧಿಕಾರವು ಸೂಕ್ತವಾದ ಬೈಲಾ ಅಥವಾ ಉಪನಿಬಂಧಗಳನ್ನು ಮಾಡತಕ್ಕದ್ದು (ಕಲಂ 20E).

**5. ರಾಷ್ಟ್ರೀಯ ಸ್ಮಾರಕಗಳ ಪ್ರಾಧಿಕಾರ**

ಕೇಂದ್ರ ಸರಕಾರವು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಿಸುವ ಮೂಲಕ ರಾಷ್ಟ್ರೀಯ ಸ್ಮಾರಕಗಳ ಪ್ರಾಧಿಕಾರವನ್ನು ಸ್ಥಾಪಿಸುತ್ತದೆ. ಪ್ರಾಕ್ತನ ಶಾಸ್ತ್ರ, ನಗರಾಭಿವೃದ್ಧಿ ಯೋಜನೆ, ಪಾರಂಪರಿಕ ಕಟ್ಟಡಗಳ ಸುರಕ್ಷೆ ಅಥವಾ ಕಾನೂನು ಕ್ಷೇತ್ರಗಳಲ್ಲಿ ಸ್ಥಾಪಿತವಾದ ಅನುಭವ ಮತ್ತು ಪರಿಣತಿಯಿರುವ ಪೂರ್ಣಾವಧಿ ಅಧ್ಯಕ್ಷರು ಮತ್ತು ಕೇಂದ್ರಸರಕಾರವು ನೇಮಕ ಮಾಡಿದ ಈ ಕ್ಷೇತ್ರದಲ್ಲಿ ಪರಿಣಿತರಾದ ಮತ್ತು ಆಯ್ಕೆ ಸಮಿತಿಯ ಪೂರ್ಣಾವಧಿ ಸದಸ್ಯರು ಮತ್ತು 5 ಅರೆಕಾಲಿಕ ಸದಸ್ಯರು ಈ ಪ್ರಾಧಿಕಾರದಲ್ಲಿರುತ್ತಾರೆ. ಇವರ ಸದಸ್ಯತ್ವದ ಅವಧಿ 3 ವರ್ಷ. ದಿವಾಳಿ, ಅಪರಾಧ, ವೈಕಲ್ಯ, ಆರ್ಥಿಕ ಆಸಕ್ತಿಯ ಕಾರಣಗಳಿಗಾಗಿ ಸದಸ್ಯತ್ವ ರದ್ದತಿಗೆ ಸಾಧ್ಯತೆಯಿದೆ. ಕೇಂದ್ರ ಸರಕಾರವು ಸದರಿ ಪ್ರಾಧಿಕಾರಕ್ಕೆ ನಿರ್ದೇಶನ ನೀಡುವ ಮತ್ತು ನಿರ್ದೇಶನಗಳನ್ನು ಪ್ರಾಧಿಕಾರವು ಉಲ್ಲಂಘಿಸಿದಾಗ ಅಥವಾ ಅಧಿಕಾರ ಬಳಕೆಯಲ್ಲಿ ವಿಫಲಗೊಂಡಾಗ ಅಥವಾ ಸಾರ್ವಜನಿಕ ಉದ್ದೇಶಕ್ಕಾಗಿ ಆವಶ್ಯವಿದ್ದಾಗ ಪ್ರಾಧಿಕಾರವನ್ನು ರದ್ದುಗೊಳಿಸುವ ಅಧಿಕಾರವನ್ನು ಹೊಂದಿದೆ.ಕೇಂದ್ರ ಸರಕಾರಕ್ಕೆ ಪ್ರಾಧಿಕಾರವು ವಾರ್ಷಿಕ ವರದಿ ಸಲ್ಲಿಸಬೇಕು. ರಾಷ್ಟ್ರೀಯ ಸ್ಮಾರಕ ಪ್ರಾಧಿಕಾರಕ್ಕಿರುವ ಅಧಿಕಾರಗಳು: (i) ಸಂರಕ್ಷಿತ ಸ್ಮಾರಕಗಳು ಮತ್ತು ಸಂರಕ್ಷಿತ ಕ್ಷೇತ್ರಗಳ ಶ್ರೇಣೀಕರಣ ಮತ್ತು ವರ್ಗೀಕರಣ ಮಾಡಲು ಕೇಂದ್ರ ಸರಕಾರಕ್ಕೆ ಶಿಫಾರಸ್ಸು ಮಾಡುವುದು; (ii) ಸಕ್ಷಮ ಪ್ರಾಧಿಕಾರಗಳ ಕಾರ್ಯದ ಮೇಲುಸ್ತುವಾರಿ ನೋಡುವುದು; (iii) 1958ರ ಅಧಿನಿಯಮವನ್ನು ಅನುಷ್ಠಾನಗೊಳಿಸಲು ಸಲಹೆ ನೀಡುವುದು; (iv) ಪ್ರಸ್ತಾಪಿತ ಬೃಹತ್ ಮಟ್ಟದ ಅಭಿವೃದ್ಧಿ ಯೋಜನೆಗಳು ಮತ್ತಿತರ ಯೋಜನೆಗಳ ಕಾಮಗಾರಿಗಳಿಂದ ಸಂರಕ್ಷಿತ ಸ್ಮಾರಕ ಅಥವಾ ಸಂರಕ್ಷಿತ ಸ್ಥಳಗಳಿಗೆ ಆಗುವ ಪರಿಣಾಮದ ಕುರಿತು ಶಿಫಾರಸ್ಸು ಮಾಡುವುದು; ಮತ್ತು (v) ಸಕ್ಷಮ ಪ್ರಾಧಿಕಾರವು ಅನುಮತಿ ನೀಡುವ ಅಥವಾ ನಿರಾಕರಿಸುವ ಕುರಿತು ಶಿಫಾರಸ್ಸು ಮಾಡುವುದು.

**6. ಪುರಾತನ ಸ್ಥಳಗಳ ಉತ್ಖನನ**

ಯಾವುದೇ ಸಂರಕ್ಷಿತ ಕ್ಷೇತ್ರದಲ್ಲಿ ಉತ್ಖನನ ಮಾಡಲು ಪ್ರಾಕ್ತನ ಅಧಿಕಾರಿ ಅಥವಾ ಅವನಿಂದ ಆ ಕುರಿತು ಅಧಿಕಾರ ಪಡೆದ ಅಧಿಕಾರಿ ಅಥವಾ 1958ರ ಅಧಿನಿಯಮದ ಅಡಿಯಲ್ಲಿ ಲೈಸೆನ್ಸ್ ಹೊಂದಿದ ಯಾವುದೇ ವ್ಯಕ್ತಿಯು ಕಲೆಕ್ಟರನಿಗೆ ಮತ್ತು ಮಾಲೀಕನಿಗೆ ಲಿಖಿತ ತಿಳುವಳಿಕೆ ಪತ್ರವನ್ನು ನೀಡಿದ ನಂತರ ಸದರಿ ಸಂರಕ್ಷಿತ ಕ್ಷೇತ್ರವನ್ನು ಪ್ರವೇಶಿಸಬಹುದು (ಕಲಂ 21). ಯಾವುದಾದರೂ ಸಂರಕ್ಷಿತ ಕ್ಷೇತ್ರವಲ್ಲದ ಇತರ ಕ್ಷೇತ್ರದಲ್ಲಿ ಐತಿಹಾಸಿಕ ಅಥವಾ ಪ್ರಾಕ್ತನ ಮಹತ್ವದ ಭಗ್ನ ಅವಶೇಷಗಳು ಅಥವಾ ಉಳಿಕೆಯ ಇರಬಹುದೆಂದು ಸಮಂಜಸ ನಂಬಿಕೆಯನ್ನು ಒಬ್ಬ ಪ್ರಾಕ್ತನ ಅಧಿಕಾರಿಯು ಹೊಂದಿದಲ್ಲಿ ಅವನು ಅಥವಾ ಅವನಿಂದ ಅಧಿಕಾರ ಪಡೆದವನು ಕಲೆಕ್ಟರನಿಗೆ ಮತ್ತು ಮಾಲೀಕನಿಗೆ ತಿಳುವಳಿಕೆ ಪತ್ರವನ್ನು ನೀಡಿ ಸದರಿ ಕ್ಷೇತ್ರವನ್ನು ಪ್ರವೇಶಿಸಿ ಅಲ್ಲಿ ಉತ್ಖನನ ಕೈಗೊಳ್ಳಬಹುದು (ಕಲಂ 22).

ಮೇಲಿನ ಸಂದರ್ಭದಲ್ಲಿ ಉತ್ಖನನ ಮಾಡಿದುದರ ಪರಿಣಾಮವಾಗಿ ಯಾವುದಾದರೂ ಪುರಾವಶೇಷಗಳು ಕಂಡು ಹಿಡಿಯಲ್ಪಟ್ಟಲ್ಲಿ ಪ್ರಾಕ್ತನ ಅಧಿಕಾರಿಯ ಅಥವಾ ಲೈಸೆನ್ಸ್‌ದಾರನು ಸಾಧ್ಯವಾದ ಮಟ್ಟಿಗೆ ಪುರಾವಶೇಷಗಳನ್ನು ಪರೀಕ್ಷಿಸಿ ನಿಯಮಾವಳಿಯಲ್ಲಿ ಹೇಳಿದ ರೀತ್ಯಾ ವರದಿಯನ್ನು ತಯಾರಿಸಿ ಕೇಂದ್ರಸರಕಾರಕ್ಕೆ ಸಲ್ಲಿಸಬೇಕು. ಉತ್ಖನನದ ಪ್ರಕ್ರಿಯೆಯು ಪೂರ್ಣಗೊಂಡ ಮೇಲೆ ಭೂ ಮಾಲೀಕನಿಗೆ ಸದರಿ ಕ್ಷೇತ್ರದಲ್ಲಿ ಶೋಧಿಸಲ್ಪಟ್ಟ ಪುರಾವಶೇಷಗಳ ಸ್ವಭಾವದ ವಿವರವನ್ನು ಕೊಡುವ ಲಿಖಿತ ತಿಳುವಳಿಕೆ ಪತ್ರವನ್ನು ಕೊಡಬೇಕು. ಸದರಿ ಪುರಾವಶೇಷಗಳನ್ನು ಕಡ್ಡಾಯವಾಗಿ ಸ್ವಾಧೀನ ಪಡಿಸುವ ಆದೇಶವನ್ನು ಹೊರಡಿಸುವವರೆಗೆ ಅವುಗಳನ್ನು ಪ್ರಾಕ್ತನ ಅಧಿಕಾರಿಯು ಅಥವಾ ಲೈಸೆನ್ಸ್‌ದಾರನು ಜೋಪಾನವಾಗಿ ತಮ್ಮ ಸುಪರ್ದಿಯಲ್ಲಿ ಇರಿಸಿಕೊಳ್ಳತಕ್ಕದ್ದು. ಕೇಂದ್ರ ಸರಕಾರಕ್ಕೆ ವರದಿಯು ತಲುಪಿದ ನಂತರ ಅದು ಸದರಿ ಪುರಾವಶೇಷಗಳ ಕಡ್ಡಾಯ ಸ್ವಾಧೀನಕ್ಕೆ ಆದೇಶ ನೀಡಬಹುದು (ಕಲಂ 23).

ಪುರಾತನ ಸ್ಥಳಗಳ ಪ್ರವೇಶ ಮತ್ತು ಉತ್ಖನನ ಮಾಡಿದ ಸಂದರ್ಭದಲ್ಲಿ ಸದರಿ ಜಮೀನಿಗೆ ಯಾವುದೇ ನಷ್ಟ ಅಥವಾ ಹಾನಿ ಅಥವಾ ಜಮೀನಿನಿಂದ ಬರುವ ಲಾಭದಲ್ಲಿ ಕಡಿತವುಂಟಾಗಿದ್ದಲ್ಲಿ ಅದರ ಮಾಲೀಕನಿಗೆ ಅದರ ಬಗ್ಗೆ ಪರಿಹಾರ ಧನವನ್ನು ಕೇಂದ್ರ ಸರಕಾರವು ಕೊಡತಕ್ಕದ್ದು (ಕಲಂ 27).

ಯಾವುದೇ ರಾಜ್ಯ ಸರಕಾರವು ಕೇಂದ್ರ ಸರಕಾರದ ಪೂರ್ವ ಸಮ್ಮತಿಯಿಲ್ಲದೆ ಮತ್ತು ನಿಯಮಗಳನ್ನು ಅಥವಾ ನಿರ್ದೇಶನಗಳನ್ನು ಪಾಲಿಸದೆ ಸಂರಕ್ಷಿತವಲ್ಲದ ಕ್ಷೇತ್ರಗಳಲ್ಲಿ ಪುರಾತತ್ವ ಉದ್ದೇಶಕ್ಕಾಗಿ ಉತ್ಖನನ ಮತ್ತಿತರ ಪ್ರಕ್ರಿಯೆಗಳನ್ನು ಕೈಗೊಳ್ಳುವುದಾಗಲೀ ಇನ್ನೊಬ್ಬರಿಗೆ ಕೈಗೊಳ್ಳಲು ಅಧಿಕಾರ ನೀಡುವುದಾಗಲೀ ಮಾಡಬಾರದು (ಕಲಂ 24).

**7. ಪುರಾವಶೇಷಗಳ ಸಂರಕ್ಷಣೆ**

ಕೇಂದ್ರ ಸರಕಾರವು ಯಾವುದೇ ಪುರಾವಶೇಷಗಳನ್ನು ಅಥವಾ ಅವುಗಳ ವರ್ಗವನ್ನು ಸರಕಾರದ ಅನುಮತಿಯಿಲ್ಲದೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸಬಾರದೆಂದು ಪರಿಗಣಿಸಿದರೆ, ಅಧಿಕೃತ ರಾಜ್ಯಪತ್ರದಲ್ಲಿ ಆ ಕುರಿತಾಗಿ ನಿಷೇಧವನ್ನು ಪ್ರಕಟಿಸಬಹುದು (ಕಲಂ 25). ಯಾವುದಾದರೂ ಪುರಾವಶೇಷವು ನಾಶಗೊಳಿಸಲ್ಪಡುವ, ಸಾಗಿಸಲ್ಪಡುವ, ಹಾನಿಗೊಳಿಸಲ್ಪಡುವ, ದುರುಪಯೋಗಿಸಲ್ಪಡುವ ಅಥವಾ ನಷ್ಟಗೊಳ್ಳುವ ಅಪಾಯದಲ್ಲಿದೆಯೆಂದು ಅಥವಾ ಐತಿಹಾಸಿಕ ವ ಪ್ರಾಕ್ತನ ಮಹತ್ವಕ್ಕಾಗಿ ಸಾರ್ವಜನಿಕ ಸ್ಥಳದಲ್ಲಿಡಬೇಕಾದ ಅಗತ್ಯವಿದೆಯೆಂದು ಕೇಂದ್ರ ಸರಕಾರವು ಅಭಿಪ್ರಾಯಪಟ್ಟಲ್ಲಿ ಅವುಗಳ ಕಡ್ಡಾಯ ಸ್ವಾಧೀನದ ಆದೇಶವನ್ನು ಹೊರಡಿಸುತ್ತಾ ಅದರ ಮಾಲೀಕನಿಗೆ ತಿಳುವಳಿಕೆ ಪತ್ರವನ್ನು ನೀಡಬಹುದು. ಆ ಪತ್ರದಲ್ಲಿ ನಮೂದಿಸಿದ ತಾರೀಕಿನಿಂದ ಆ ಪುರಾವಶೇಷದ ಹಕ್ಕು ಕೇಂದ್ರ ಸರಕಾರಕ್ಕೆ ಸಲ್ಲುತ್ತದೆ. ಆದರೆ ನೈಜ ಧಾರ್ಮಿಕ ಆಚರಣೆಯ ಬಳಕೆಯಲ್ಲಿರುವ ಯಾವುದೇ ಪ್ರತಿಮೆ ಅಥವಾ ಚಿಹ್ನೆಗಳನ್ನು ಕಡ್ಡಾಯ ಸ್ವಾಧೀನಪಡಿಸಿಕೊಳ್ಳುವಂತಿಲ್ಲ (ಕಲಂ 26). ಕಡ್ಡಾಯ ಸ್ವಾಧೀನಕ್ಕೆ ಗುರಿಯಾದ ಪುರಾವಶೇಷದ ಮಾಲೀಕನಿಗೆ ಪುರಾವಶೇಷ ಮತ್ತು ಕಲಾಭಂಡಾರ ಅಧಿನಿಯಮದ (1972) ಪ್ರಕಾರ ಲೆಕ್ಕಹಾಕಿ ಪರಿಹಾರಧನವನ್ನು ಕೊಡಬೇಕು (ಕಲಂ 28(2)).

**8. ಅಪರಾಧಿಗಳಿಗೆ ದಂಡನೆ**

ಯಾರೇ ಆಗಲಿ ಸಂರಕ್ಷಿತ ಸ್ಮಾರಕವನ್ನು ನಾಶಮಾಡಿದರೆ, ಸಾಗಿಸಿದರೆ, ಹಾನಿಗೊಳಿಸಿದರೆ, ಬದಲಾಯಿಸಿದರೆ, ವಿಕೃತಿಗೊಳಿಸಿದರೆ ಅಥವಾ ದುರುಪಯೋಗಗೊಳಿಸಿದರೆ; ಅಥವಾ, ಸಂರಕ್ಷಿತ ಸ್ಮಾರಕದ ಮಾಲೀಕ ಅಥವಾ ನಿವಾಸಿಗನಾಗಿ ಕರಾರು ಮಾಡಲು ತಿರಸ್ಕರಿಸಿದರೆ ಅಥವಾ ಕರಾರನ್ನು ಉಲ್ಲಂಘಿಸಿದರೆ; ಅಥವಾ, ಸಂರಕ್ಷಿತ ಸ್ಮಾರಕದಿಂದ ಯಾವುದೇ ಶಿಲ್ಪ, ಕೆತ್ತನೆ, ಪ್ರತಿಮೆ, ಅರೆಯುಬ್ಬು ಚಿತ್ರ, ಶಾಸನ ಅಥವಾ ಇತರ ವಸ್ತುಗಳನ್ನು ಸಾಗಿಸಿದರೆ; ಅಥವಾ, ಸಂರಕ್ಷಿತ ಕ್ಷೇತ್ರದಲ್ಲಿ ಗಣಿಗಾರಿಕೆ, ಉತ್ಖನನ ಇತ್ಯಾದಿಗಳನ್ನು ಮಾಡಿದರೆ ಅಂತಹ ವ್ಯಕ್ತಿಗೆ 2 ವರ್ಷದವರೆಗಿನ ಸೆರೆಮನೆ ವಾಸ ಅಥವಾ ಒಂದು ಲಕ್ಷ ರೂಪಾಯಿವರೆಗಿನ ದಂಡವನ್ನು ವಿಧಿಸಬಹುದು. ಅಧಿಕೃತ ಪ್ರಕಟಣೆಗೆ ವಿರುದ್ಧವಾಗಿ ಪುರಾವಶೇಷಗಳನ್ನು ಸಾಗಿಸುವ ವನಿಗೂ ಇದೇ ರೀತಿಯ ಶಿಕ್ಷೆಯನ್ನು ಹೇಳಲಾಗಿದೆ. ನಿಷೇಧಿತ ಕ್ಷೇತ್ರದಲ್ಲಿ ಕಟ್ಟಡ ಕಟ್ಟುವ, ಅಥವಾ ನಿಯಂತ್ರಿತ ಕ್ಷೇತ್ರದಲ್ಲಿ ಸಕ್ಷಮ ಅಧಿಕಾರಿಯ ಅನುಮತಿಯಿಲ್ಲದೆ ಕಟ್ಟಡ ಕಟ್ಟುವ ಯಾವುದೇ ವ್ಯಕ್ತಿಗೂ ಇದೇ ರೀತಿಯ ಶಿಕ್ಷೆಯನ್ನು ಹೇಳಲಾಗಿದೆ. ಕೇಂದ್ರ ಸರಕಾರದ ಅಧಿಕಾರಿಗಳು ನಿಷೇಧಿತ ಅಥವಾ ನಿಯಂತ್ರಿತ ಕ್ಷೇತ್ರಗಳಲ್ಲಿ ಅನಧಿಕೃತ ಕಟ್ಟಡ ಕಟ್ಟುವಲ್ಲಿ ಶಾಮೀಲಾಗಿದ್ದರೆ ಅವರಿಗೆ 3 ವರ್ಷದ ಸೆರೆಮನೆವಾಸ ಅಥವಾ ಮತ್ತು ದಂಡವನ್ನು ವಿಧಿಸಬಹುದು.

ಒಟ್ಟಿನಲ್ಲಿ ಐತಿಹಾಸಿಕ ಮತ್ತು ಸಂಸ್ಕೃತಿಕ ಸಂಪತ್ತುಗಳನ್ನು ಮುಂದಿನ ಜನಾಂಗಕ್ಕೂ ಸಿಗುವಂತೆ ಮಾಡುವ ಉದ್ದೇಶದಿಂದ ಹಲವಾರು ರೀತಿಯ ಕೃತ್ಯಗಳನ್ನು, ಆರ್ಥಿಕ ಪ್ರಕ್ರಿಯೆಯನ್ನು ಮತ್ತು ನಿರ್ಲಕ್ಷತೆಗಳನ್ನು ನಿಯಂತ್ರಿಸಿದ್ದನ್ನು ಈ ಕಾನೂನಿನಲ್ಲಿ ಕಾಣುತ್ತೇವೆ (*ಕೆ. ಗುರುಪ್ರಸಾದ ರಾವ್ ವಿ. ಕರ್ನಾಟಕ ರಾಜ್ಯ (2013)* 8 ಎಸ್‌ಸಿಸಿ 418).

❖

## ಯುವಕರಲ್ಲಿ ಸಹಕಾರ...

(ಒಂದನೇ ಪುಟದಿಂದ)

ದರ್ಶಕ ಹಾಗೂ ಉದಾರದಾಯಿತ್ವದ ಸೌಹಾರ್ದ ಸಹಕಾರಿ ವ್ಯವಸ್ಥೆಯ ನಿರ್ಮಾಣದ ಧ್ಯೇಯ ದೊಂದಿಗೆ ಸ್ವಾಯತ್ತತೆ, ಸಾಮಾಜಿಕ ಭದ್ರತೆ, ಸಹಕಾರಾತ್ಮಕ ಚಿಂತನೆ, ಅಭಿವೃದ್ಧಿ ಪರ ವಿಶ್ವ ಮಾದರಿ ದೃಷ್ಟಿಕೋನದೊಂದಿಗೆ ಸಹಕಾರಿ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಹೇಳಿದರು.

ಶ್ರೀ ಯಶವಂತ ಡೊಂಗ್ರೆ, ಮಾನ್ಯ ಕುಲಪತಿಗಳು (ನಿ.), ಮೈಸೂರು ವಿಶ್ವವಿದ್ಯಾಲಯ, ಮೈಸೂರು ಇವರು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿ ಸಹಕಾರ ಮತ್ತು ಯುವಕರ ಕುರಿತು ಸಹಕಾರ ಜಾಗೃತಿಯನ್ನು ಮೂಡಿಸುವಲ್ಲಿ ವಿಷಯ ಮಂಡನೆಯನ್ನು ಮಾಡಿದರು. ಈ ಕಾರ್ಯಕ್ರಮದಲ್ಲಿ ಗಣ್ಯರಾಗಿ ಶ್ರೀ ಕೆ ಮುನಿಯಪ್ಪ, ಮಾನ್ಯ ಸಹಕಾರ ಸಂಘಗಳ ಜಂಟಿ ನಿಬಂಧಕರು ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಡಿಸಿಸಿ ಬ್ಯಾಂಕ್ ಧಾರವಾಡ, ಶ್ರೀ ಅನೂಪ ದೇಶಪಾಂಡೆ, ಮಾನ್ಯ ವಕೀಲರು, ಧಾರವಾಡ, ಶ್ರೀಮತಿ ಎಸ್. ಬಿ. ಹಿರೇಮಠ, ಮಾನ್ಯ ಸಹಕಾರ ಸಂಘಗಳ ಉಪನಿಬಂಧಕರು (ಪ್ರ), ಧಾರವಾಡ, ಶ್ರೀ ಅಲ್ಲಾಭಕ್ಷ ಬಿಜಾಪುರೆ, ಮಾನ್ಯ ಉಪನಿರ್ದೇಶಕರು ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ, ಧಾರವಾಡ, ಶ್ರೀ ಸುರೇಶ ನಾಯ್ಕ ಕೆ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಹಾಲು ಉತ್ಪಾದಕರ ಒಕ್ಕೂಟ, ಧಾರವಾಡ ಹಾಗೂ ಶ್ರೀ ಒಂಡು ಕುಲಕರ್ಣಿ, ಮಾನ್ಯ ಸ್ಥಾನಿಕ ಸಂಪಾದಕರು, ವಿಜಯ ಕರ್ನಾಟಕ, ಹುಬ್ಬಳ್ಳಿ, ಬೆಳಗಾವಿ ಇವರು ಉಪಸ್ಥಿತರಿದ್ದರು. ಕಾರ್ಯಕ್ರಮಕ್ಕೆ ಆಗಮಿಸಿದಂತಹ ಅತಿಥಿ ಗಣ್ಯರನ್ನು ಪ್ರೊ. (ಡಾ.) ಸಿ. ಎಸ್. ಪಾಟೀಲ, ಡೀನ್ ಮತ್ತು ನಿರ್ದೇಶಕರು, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ ಇವರು ಸ್ವಾಗತಿಸಿದರು.

ಶ್ರೀ ಶ್ರೀಕಾಂತ ಬರುವೆ, ಮಾನ್ಯ ಉಪಪ್ರಧಾನ ವ್ಯವಸ್ಥಾಪರು, ಬೆಳಗಾವಿ ಪ್ರಾಂತೀಯ ಕಛೇರಿ ಇವರು ಕಾರ್ಯಕ್ರಮದ ವಂದನಾರ್ಪಣೆಯನ್ನು ನೆರವೇರಿಸಿಕೊಟ್ಟರು.

❖